July 2016 IJRSS Volume 6, Issue 7 ISSN: 2249-2496

# Social Personality of Poorna Chandra Tejaswi as depicted in his literary works

**Dr B. N. Sharada**

## ತೇಜಸ್ವಿಯವರ ಕೃತಿಗಳಲ್ಲಿ ಅನಾವರಣಗೊಂಡಿರುವ ಅವರ ಸಾಮಾಜಿಕ ವ್ಯಕ್ತಿತ್ವ

**ಡಾ.ಬಿ.ಎನ್.ಶಾರದ**
ಸಹ ಪ್ರಾಧ್ಯಾಪಕರು, ಕನ್ನಡವಿಭಾಗ
ಸರ್ಕಾರಿ ಬಾಲಕರ ಕಾಲೇಜು, ಕೋಲಾರ

ಹೊಸಗನ್ನಡದ ಯಾವುದೇ ಪಂಥ, ಏಕ ವಿಚಾರಧಾರೆ, ಒಂದು ನಿರ್ಧಿಷ್ಟ ಚಿಂತಕರ ಸಾಲಿನಲ್ಲಿ ನಿಲ್ಲಿಸಲಾಗದ, ಹಾಗೂ ತೇಜಸ್ವಿ ಎಂದರೆ ಇದು ಎಂದು ಕರಾರುವಾಕ್ಕಾಗಿ, ಸೀಮಿತ ವಲಯದಲ್ಲಿ ಸಿಲುಕಿಸಲಾಗದ, ಅತ್ಯಂತ ಗೂಢ, ವಿಸ್ಮಯ ಎನಿಸುವಾಗಲೇ ತೆರೆದ ಪುಸ್ತಕವಾಗುವ, ಇನ್ನೇನು ಅರ್ಥವಾಗಿಯೆಬಿಟ್ಟಿತು ಎಂದುಕೊಳ್ಳುವ ಹೊತ್ತಿಗೆ ಹಾರಿಹೋದ ಹಕ್ಕಿಯಾಗುವ, ಇವರ ವ್ಯಕ್ತಿತ್ವ ಮತ್ತು ಬರವಣಿಗೆಯ ಬಗ್ಗೆ ಹೇಳುವುದು ಒಂದು ಸಾಹಸವೆನಿಸುತ್ತದೆ. ವಸ್ತುವಿನ ಆಯ್ಕೆ, ಬರವಣಿಗೆಯ ಶೈಲಿ, ಅಚ್ಚುಕಟ್ಟುತನ, ಆಳವಾದ ಶೋಧ ಇವರ ವೈಶಿಷ್ಟ್ಯ. ಇವರಲ್ಲಿ ಜಗಳ, ಸಾವು, ಜಾತಿ ವೈಷಮ್ಯ, ದೆವ್ವಭೂತ, ಸುಲಿಗೆ, ನಟನೆ, ಹೀಗೆ ಜನಪ್ರಿಯ ಸಾಹಿತ್ಯದ ಎಲ್ಲಾ ವಿಚಾರಗಳು ಹಾಸ್ಯಭರಿತವಾಗಿ, ಸಂಕೋಚವಿಲ್ಲದೆ, ಸಲೀಸಾಗಿ, ಮುಕ್ತವಾಗಿ ಬಂದಿದೆ. ಜೀವ ಪರಿಸರದ ಸೂಕ್ಷ್ಮತೆಗಳನ್ನು ಮನುಷ್ಯ ಪ್ರಪಂಚದ ಜೊತೆ ಸಂವಾದಿಸುವಂತೆ ಮಾಡುತ್ತಾರೆ. ಜುಗಾರಿ ಕ್ರಾಸ್ ನಲ್ಲಿ ಅರ್ಥಹೀನ ಬದುಕಿನಲ್ಲೂ ಅರ್ಥ ಹುಡುಕುವ, ಬದುಕನ್ನು ಎದುರಿಸಲು ಆಶಾವಾದ, ನಿರಾಶಾವಾದ ಮೀರಿದ ಗಂಭೀರ ಎದೆಗಾರಿಕೆಯ ಅಗತ್ಯವನ್ನು ಮಿಂಚಿಸುತ್ತಾರೆ. ಜನರಿಂದ ದೂರವಿದ್ದೂ ಜನರಿಗೆ ಬೇಕಾದ ಪರಿಚಿತ ಜಗತ್ತಿನ ವಿಸ್ಮಯಗಳನ್ನು ಕಟ್ಟಿಕೊಡುತ್ತಾರೆ. ಲೋಹಿಯ ಅವರ ತತ್ವಚಿಂತನೆ, ಕುವೆಂಪು ಅವರ ಕಲಾ ದೃಷ್ಠಿ, ಕಾರಂತರ ಪ್ರಯೋಗಶೀಲತೆ ಇವರ ಸಾಹಿತ್ಯದ ಮೇಲೆ ಅಗಾಧ ಪ್ರಭಾವ ಬೀರಿದೆ. ನಿಸರ್ಗದ ನಿಕಟ ಒಡನಾಟ, ಪ್ರಕೃತಿ ಅಧ್ಯಯನ, ಸಂಶೋಧನೆ ಅವರನ್ನು ಬೆಳೆಸಿದೆ. ಸಿನೆಮಾ ಹುಚ್ಚು, ಸ್ಮಶಾನದಲ್ಲಿ ದೆವ್ವ ಹುಡುಕಿ ಅಲೆದಾಟ, ಅವರ ಆಸಕ್ತಿಯ ಮತ್ತೊಂದು ಮುಖ. ಸತ್ಯಶೋಧಕ ಮನಸ್ಸಿನ, ರೂಕ್ಷಬದುಕಿಗೆ ದೂರವಾದ, ವೈಚಾರಿಕತೆಯ, ಜ್ಞಾನದಾಹದ, ಪರಿಸರ ಪ್ರೀತಿಯ ಅನೇಕ ಆಯಾಮಗಳು ಅವರ ಬರಹಕ್ಕಿವೆ. ಆಧುನಿಕ ಕೃಷಿಕ, ಪ್ರಜಾಪ್ರಭುತ್ವವಾದಿ ಧೋರಣೆಯ, ಇತರರಿಗೆ ಸ್ಫೂರ್ತಿಯ ಚಿಲುಮೆಯ ಪಾದರಸದಂಥ ವ್ಯಕ್ತಿತ್ವ. ಅವರದು ಅಪಾರ ಮಾನವೀಯ ಮೌಲ್ಯಗಳ, ಎಲ್ಲವನ್ನೂ, ಎಲ್ಲರನ್ನೂ, ಸಮಾನವಾಗಿ ಪರಿಭಾವಿಸುವ ಗುಣ. ವಿಜ್ಞಾನವನ್ನು ಕಲಾಕೃತಿಯಾಗಿಸುವ ಪ್ರತಿಭಾವಂತ. ತಮ್ಮ ಅನುಭವವನ್ನು ಸಾಹಿತ್ಯ ಕೃತಿಯಾಗಿಸುವುದಕ್ಕಿಂತ, ಕ್ಷಿಪ್ರ ಹಾಗೂ ಸಮರ್ಥವಾಗಿ ಅನೇಕರಿಗೆ ತಲುಪಿಸುವುದು ಹೇಗೆ ಎಂದು ಆಲೋಚಿಸಿದವರು. ಸಕ್ರಿಯ ವ್ಯಕ್ತಿತ್ವ, ಹೃದಯ ವೈಶಾಲ್ಯತೆ ಅವರ ಗುಣ.ಲೈಫ್ ಈಸ್ ಎ ಫೋರ್ಸ್, ಎಲ್ಲವನ್ನೂ ತಡೆಹಿಡಿದು ಬದುಕುವುದರಲ್ಲಿ ಅರ್ಥವಿಲ್ಲ ಎನ್ನುವ ಮನೋಧರ್ಮ.

**ಯುವಸಮುದಾಯ ಕುರಿತಂತೆ:** ಚಿದಂಬರ ರಹಸ್ಯದಲ್ಲಿನ ಯುವಕರು ತಮ್ಮ ಪ್ರೀತಿ ವೈಫಲ್ಯಕ್ಕೆ ಪರ್ಯಾಯವಾಗಿ ಕ್ರಾಂತಿಯ ಮೊರೆ ಹೊಗುವುದು. ತಾವು ಯಾರ ಬಗ್ಗೆ ಸಿಟ್ಟಾಗಿದ್ದರೋ ಅವರಿಗೆ ಬುದ್ಧಿ ಕಲಿಸುವ ಕ್ರಮವಾದರೂ, ಯುವಕರಲ್ಲಿ ಒಂದು ಎಚ್ಚರಿಕೆ ಮೂಡಿರುವುದು ಸಂತಸದ ವಿಷಯ. ವೈಯಕ್ತಿಕ ಪ್ರೀತಿ ದೇಶ ಪ್ರೀತಿಯಾಗಿಸುವ, ಸ್ವಂತ ಬದುಕಿನ ಪೀಕಲಾಟ, ಅಸಹನೆಯ ಹೊರಮಾರ್ಗವಾಗಿ ಸಾಮಾಜಿಕ ಪ್ರಜ್ಞೆ ಹೊಂದಿ, ಸರ್ಕಾರ, ಬಂಡವಾಳಶಾಹಿ ಶ್ರೀಮಂತರ ವಿರುದ್ಧ ತಿರುಗುವಿಕೆ ಕಾಣುತ್ತೇವೆ. ಫುಕೋವೋಕ್ ನ "ಒನ್ ಸ್ಟ್ರಾ ರೆವಲ್ಯೂಷನ್" ನಿಂದ ಪ್ರೇರಿತರಾಗಿ "ಒಂದು ಸಹಜ ಕೃಷಿ" ಬರೆವ ಮೂಲಕ ನೂರಾರು ಯುವ ಕೃಷಿಕರನ್ನು ಪ್ರಯೋಗಕ್ಕೆ ಹಚ್ಚುತ್ತಾರೆ. ಮೀನುಗಾರಿಕೆಯನ್ನು ಕಂಡು ತಿಳಿದಿದ್ದ ಇಕ್ಬಾಲ್, ಓದಿ ತಿಳಿದಿದ್ದ ಮಂಜಪ್ಪ ಇಬ್ಬರಿಂದಲೂ ತಿಳಿದುಕೊಳ್ಳುವ ತೇಜಸ್ವಿಗೆ ಅವರಿಬ್ಬರೂ ಒಂದೇ. ಗಾಳಕ್ಕೆ ದಾರವನ್ನು ಕಟ್ಟುವುದು ಹೇಗೆ ಎಂಬುದನ್ನು ಅತ್ಯಂತ ಪ್ರೀತಿಯಿಂದ ಕಲಿಸುವ ಗುರು. ಹೆದರುವ ಯುವಕರಿಗೆ "ನಂಜುಂಡಸ್ವಾಮಿ ಅವರ ಜೊತೆಗಿರಿ. ಧೈರ್ಯನೂ ಬರತ್ತೆ. ಹೋರಾಟದ ಮನೋಭಾವನೂ ಬರತ್ತೆ" ಎಂದು ಹುರಿದುಂಬಿಸುತ್ತಿದ್ದರು. ಜೀವನ ಸಂಗ್ರಾಮದಲ್ಲಿ ಸೋತು, ಕಂಗೆಟ್ಟವರಿಗೆ ಸಾಂತ್ವನ ಹೇಳುವ ಕೌನ್ಸಿಲರ್. ಅಪರಾಧಿಗಳು, ದಲ್ಲಾಳಿಗಳು, ಮೋಸಗಾರರಿಗೂ ಅವರ ಅಸಹಾಯಕತೆಗಾಗಿ ತೇಜಸ್ವೀ ಅವರ ಸಹಾನುಭೂತಿ ಇದೆ.

**ಪರಿಸರದ ಬಗ್ಗೆ;** ಇವರು ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾದ ಪ್ರಕೃತಿ ಮತ್ತು ಪರಿಸರದೊಂದಿಗಿನ ಸಂವಾದವನ್ನು ಸಾಧ್ಯಮಾಡಿಸುತ್ತಾರೆ. ಶಿಕಾರಿಯೆಂದರೆಹುಚ್ಚು. ಆದರೆ ಹಿಡಿದ ಬಾಳೆ ಮೀನನ್ನು ಮತ್ತೆ ನೀರಿಗೆ ಬಿಡುವ ಅವರ ಸ್ವಭಾವ ಊಹಾತೀತ. ಇಲ್ಲೇ ಅವರು ನಮಗೆ ವಿಸ್ಮಯ, ಪರಿಸರ ಸ್ನೇಹಿ ಎನಿಸುವುದು. ಮನುಷ್ಯನಿಗಾಗಿ ಪರಿಸರವಲ್ಲ. ಅವನೂ ಕೂಡ ಪರಿಸರದ ಜೀವಿ. ಪರಿಸರ ರಕ್ಷಿಸಲು ನಾವು ಏನೂ ಮಾಡಬೇಕಾಗಿಲ್ಲ. ಅದನ್ನು ಅದರ ಪಾಡಿಗೆ ಬಿಟ್ಟರೆ ಸಾಕು ಎನ್ನುತ್ತಿದ್ದರು. ಈ ಮಾತಿನಿಂದ ಪ್ರೇರಣೆ ಪಡೆದ ಅವರ ಅನೇಕ ಸ್ನೇಹಿತರು ಕಾಡು ಕೊಂಡು ಅದನ್ನು ಹಾಗೆ ಬಿಟ್ಟರು. ಇವರ ಈ ನಿಲುವಿನ ಹಿಂದೆ ಜಪಾನಿನ ಸಹಜ ಕೃಷಿಕ ಫೋಕೊವೋಕೊನ ಬದುಕು, ಚಿಂತನೆಯಿದೆ. ಪರಿಸರದ ಸಣ್ಣ ಬದಲಾವಣೆಯೂ ಮುಂದೆ ದೊಡ್ಡ ಬದಲಾವಣೆಗೆ ಕಾರಣ ಎಂದು ಕಳವಳಿಸುತ್ತಿದ್ದರು. ಪ್ರಕೃತಿಯ ಗಟ್ಟಿ ಬುನಾದಿಯ ಮೇಲೆ ಮಾತ್ರ ಮಾನವ ಬದುಕು ಭದ್ರವಾಗಿರುತ್ತದೆ ಎಂದು ಎಚ್ಚರಿಸುತ್ತಿದ್ದರು. ಮನುಷ್ಯ ಕೇಂದ್ರಿತ ಚಿಂತನೆಯಿಂದ ಜೀವ ಕೇಂದ್ರಿತ ಚಿಂತನೆಯತ್ತ ಚಲಿಸುತ್ತಾರೆ. ಪರಿಸರ ನಾಶದೊಂದಿಗೆ ಅಲ್ಲಿನ ಜೀವಿಗಳ ಬದುಕಿನ ರಹಸ್ಯವೂ ನಾಶವಾಗಿ ಮುಂದಿನ ತಲೆಮಾರು ಅವುಗಳಿಂದ ವಂಚಿತವಾಗುತ್ತದೆ ಎಂದು ಖಿನ್ನರಾಗುತ್ತಾರೆ. ನಿಸರ್ಗದ ನಾಶಕ್ಕೆ ಅಧಿಕಾರಶಾಹಿ, ಇಲಾಖೆಗಳು, ಕಾಳದಂಧೆಗಳು, ಒಟ್ಟಾರೆ ಮನುಷ್ಯನ ಹಸ್ತಕ್ಷೇಪವೇ ಕಾರಣ ಎನ್ನುತ್ತಾರೆ. ಮನುಷ್ಯನ ಅತಿಯಾಸೆ ಮಲೆನಾಡಿನ ಬಲಿಗೆ ಕಾರಣ. ಅವನ ಅತಿಯಾಸೆ, ಕುತೂಹಲ, ಮೂರ್ಖತನ ಎಲ್ಲವನ್ನು ಒಟ್ಟುಗೂಡಿಸಿ ಕತೆಯೊಂದಿಗೆ, ಚಳುವಳಿಗೂ ಧುಮುಕುತ್ತಾರೆ. ಪರಿಸರ ಸಂರಕ್ಷಣೆಯೊಂದು "ಲೂಸಿಂಗ್ ಬ್ಯಾಟಲ್" ಎನ್ನುತ್ತಲೇ ಸೆಣೆಸುತ್ತಾರೆ. ಧಾವಂತದ ನಾಗರೀಕ ಬದುಕಿನಲ್ಲಿ ಉಪೇಕ್ಷೆಗೆ ಒಳಗಾಗುವ ಪ್ರಕೃತಿ, ನಮಗೇ ಸವಾಲಾಗುವುದನ್ನು ಗುರುತಿಸುತ್ತಾರೆ. ಜೈವಿಕ ಸಮತೋಲನವನ್ನು ಕಾಪಾಡುವುದರಲ್ಲಿ ಮನುಷ್ಯನ ಇಚ್ಛಾಶಕ್ತಿಯ ಕೊರತೆಯಿರುವುದನ್ನು ಗುರುತಿಸುತ್ತಾರೆ. ವಿದೇಶಿ ನೆರವನ್ನು ಪಡೆದು ಪರಿಸರ ಸಂರಕ್ಷಿಸುವುದು, ನಾವೇ ಜಂಜಾಟಗಳನ್ನು ಆಹ್ವಾನಿಸಿದಂತೆ, ಎನ್ನುವ ಇವರು ತಾವು ಹರಯದಲ್ಲಿ ಮಾಡಿದ ಶಿಕಾರಿಯ ಬಗ್ಗೆ ಎಂಥ ಅನರ್ಥ ಮಾಡಿದೆವು ಎಂದು ಪಶ್ಚಾತ್ತಾಪವನ್ನೂ ಪಡುತ್ತಾರೆ.

**ಜಾತೀಯತೆಯ ಬಗ್ಗೆ;** ಹುಟ್ಟನಿಂದ ಜಾತಿ ವಿರೋಧಿ ವಾತಾವರಣದಲ್ಲಿ ಬೆಳೆದ ಇವರು ಯಾವ ಕಾರಣಕ್ಕೂ ಜಾತಿಯೊಡನೆ ರಾಜಿ ಮಾಡಿಕೊಂಡಿರಲಿಲ್ಲ. ತಂದೆಯ ಪ್ರಭಾವಳಿಯಿಂದ ದೂರ ಸರಿದು, ಹಳ್ಳಿಯಲ್ಲಿ ನೆಲೆಸಿ, ಆ ಬದುಕನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾರೆ. ಮೌಢ್ಯಕ್ಕೆ ಸಿಲುಕದ, ಮಗುವಿನ ಸಹಜ ಕುತೂಹಲ ಅವರದು. ಕ್ಷೌರಿಕ ದಾಸಿ ಬಳಸುತ್ತಿದ್ದ ಪೀಪಿಯನ್ನು ಕೇಳಿ ಪಡೆದು, ಅದನ್ನು ತೊಳೆದು ಬಳಸಿದರಾಯಿತು ಎಂಬ ಮನೋಧರ್ಮ.ಧಾರ್ಮಿಕ ಮೌಢ್ಯಕ್ಕೆ ಬೇಸರಿಸದೆ, ಅದನ್ನು ಗೇಲಿಮಾಡಿ ವಿರೋಧಿಸುತ್ತಾರೆ. ದೇವರು, ಧರ್ಮ ಇವುಗಳನ್ನು ರಿಪೇರಿ ಮಾಡುವುದು ವ್ಯರ್ಥ ಎಂದು, ಅದಕ್ಕೆ ಪರ್ಯಾಯವಾಗಿ ವಿಜ್ಞಾನವನ್ನು ಬಳಸುತ್ತಾರೆ. ವಿಜ್ಞಾನಕ್ಕೂ ಮಿತಿ ಇದೆ ಎಂದು ಅರಿತವರು. ಮನುಷ್ಯ ಕೂಡ ತನ್ನ ಮಿತಿ ಅರಿತಾಗ ಅಹಂಕಾರ ಕರಗಿ ಆಧ್ಯಾತ್ಮದ ನೆಲೆ ತಲುಪಬಲ್ಲ. ಜೀವನ ಕ್ರಮ ಬದಲಾದರೆ ಮಾತ್ರ ಸಾಹಿತ್ಯ ಬದಲಾಗಬಲ್ಲದು. ಯಾವ ರೀತಿಯಿಂದಲಾದರೂ ಸರಿ ಜಾತಿಯತೆ ಕೊಚ್ಚಿ ಹೋಗಬೇಕು ಎಂದು ಮೂಡಿಗೆರೆಯಂಥ ಸಣ್ಣ ಊರಿನಲ್ಲೂ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಮೀಸಲಾತಿ ಹೆಸರಿನಲ್ಲಿ ಅಧಿಕೃತವಾಗಿ ತಲೆ ಎತ್ತಿದ ಮಠ, ಜಗದ್ಗುರುಗಳು ಸಮಾಜವನ್ನು ಒಡೆದು ತಮಾಶೆ ನೋಡುತ್ತಿವೆ ಎಂದು ಕಿಡಿ ಕಾರುತ್ತಾರೆ. ಸರ್ಕಾರಿ ಉದ್ಯಮಗಳು ಖಾಸಗೀಕರಣಕ್ಕೆ ಒಳಗಾಗಿರುವಾಗ ಮೀಸಲಾತಿಯ ಪ್ರಯೋಜನವೇನು ಎನ್ನುತ್ತಾರೆ. ಜಾತಿ ಪದ್ಧತಿ ಸಾಂಸ್ಕೃತಿಕ ಕಂದರ ನಿರ್ಮಿಸಿದೆ. ಸಾಹಿತ್ಯದಲ್ಲಿ ಮೀಸಲಾತಿಯ ಪ್ರಶ್ನೆಯೇ ಇಲ್ಲ. ಜಾಗತೀಕರಣವೇ ಇದಕ್ಕೆ ಉತ್ತರ. ಪ್ರತಿ ಚುನಾವಣೆ ನಮ್ಮ ಜಾತಿಯನ್ನು ನಾವು ಮರೆಯದಂತೆ ನವೀಕರಿಸುತ್ತಿದೆ. ನಾವು ಯಾವ ಜಾತಿಗೂ, ಮತಕ್ಕೂ ಸೇರದೆ ಬದುಕುವ ಅವಕಾಶವನ್ನು ನಮ್ಮ ಸಂವಿಧಾನ ನಮಗೆ ನೀಡಿಲ್ಲ. ಅಂತರ್ಜಾತಿ ವಿವಾಹವೂ ಗಂಡನ ಜಾತಿ, ಧರ್ಮಗಳಿಗೆ ಆಗುತ್ತಿರುವ ಮತಾಂತರ, ಎಂದು ವಿಷಾದಿಸುತ್ತಾರೆ. ಕೆಳ ಜಾತಿಯವರು ಮತಾಂತರ ಹೊಂದುವುದರ ಮೂಲಕ ಇತರ ಜಾತಿಯೊಂದಿಗೆ ಸಮಾನ ಸ್ಕಂದರಾಗಿ ನಿಲ್ಲಬಹುದು ಎಂಬ ಆಲೋಚನೆ ಇವರ ಕೆಲವು ಪಾತ್ರಗಳು ಹೊಂದಿವೆ, (ಚಿದಂಬರ ರಹಸ್ಯ ದ ಜೋಸಫ್). ಆದರೆ ಅದನ್ನು ಆದ್ಯಂತ ಪರಿಹಾರವಾಗಿ ಇವರು ಭಾವಿಸುವುದಿಲ್ಲ.

**ಸಾಹಿತ್ಯದ ಮುಖಾಂತರ ಸಾಮಾಜಿಕ ಚಿಂತನೆ:** ಅವರ ಕ್ರಾಂತಿಕಾರಕ ಮನೋಧರ್ಮ ಕೇವಲ ಅವರ ಪಾತ್ರಗಳಿಗೆ ಸೀಮಿತವಾಗದೆ, ಅದನ್ನು ವಾಸ್ತವದಲ್ಲೂ ಸಾಧಿಸಲು ಪ್ರಯತ್ನಿಸುತ್ತಾರೆ. ಹೀಗಾಗಿಯೇ ಅವರನ್ನು ಜನ ಭಯ, ಕುತೂಹಲದಿಂದ ನೋಡುತ್ತಿದ್ದುದು. ಆಪ್ತ ಗೆಳೆಯರೊಬ್ಬರು ಕತೆ ಬರೆದು ತಂದು ತೋರಿಸಿದಾಗ ಅದನ್ನು ಹರಿದು ಹಾಕಿ ಕುವೆಂಪು ಅವರನ್ನು ಓದು ಎಂದು ಹೇಳುವಲ್ಲಿ ಒಬ್ಬ ಒಳ್ಳೆ ಸಾಹಿತಿಯನ್ನು ಸೃಜಿಸುವ, ಹಾಗೂ ಒಳ್ಳೆ ಸಾಹಿತ್ಯವನ್ನು ಜನರಿಗೆ ಓದಿಸುವ ಸಾಮಾಜಿಕ ಬದ್ಧತೆಯನ್ನು ಕಾಣುತ್ತೇವೆ. ಹೆನ್ರೀ ಛರೇರೆ ಅವರ "ಪ್ಯಾಪಿಲಾನ್" ಕೃತಿ, ಫ್ರೆಂಚ್ ಸರ್ಕಾರ ತನ್ನ ನ್ಯಾಯಾಂಗ ವ್ಯವಸ್ಥೆಯನ್ನು ಬದಲಿಸುವಂತೆ, ಬಂಧೀಖಾನೆ ಸುಧಾರಿಸುವಂತೆ, ನ್ಯಾಯ ವಿತರಣೆಯ ರೀತಿಯನ್ನು ಪರಿವರ್ತಿಸುವಂತೆ ಮಾಡಿತು. ಅದರಿಂದ ಪ್ರೇರಿತರಾದ ತೇಜಸ್ವಿ ಅವರು, ಈ ಅದ್ಭುತ ಕತೆಯನ್ನು ಕನ್ನಡಿಗರಿಗೆ ಹೇಳಲೇಬೇಕೆಂಬ ಚಪಲದ ಜೊತೆಗೆ, ನಮ್ಮ ನೆಲದಲ್ಲೂ ಅಂಥ ಪರಿವರ್ತನೆಗಾಗಿ ಆಶಿಸುತ್ತಾರೆ. ಹೀಗಾಗಿ ಅದರ ಅನುವಾದವನ್ನು ಮಾಡುತ್ತಾರೆ. ಬದುಕಿನಲ್ಲಿ ಸೋಲು ಹತಾಶೆ ಯಾರಿಗೂ ತಪ್ಪಿದ್ದಲ್ಲ. ಅದರಿಂದ ಮೇಲೆದ್ದು ಮುನ್ನುಗ್ಗುವುದೊಂದೇ ದಾರಿ ಎಂದು ಅರಿವು ಮೂಡಿಸುತ್ತಾರೆ. ಅವರದು ಸಕಾರಾತ್ಮಕ ಸೃಜನಶೀಲ ಚಿಂತನೆ. ವ್ಯಕ್ತಿ ವಿಶಿಷ್ಟತೆಯನ್ನು ಮಂದಣ್ಣ, ಬಿರಿಯಾನಿ ಕರಿಯ, ವೆಂಕ್ಟ, ಕರ್ವಾಲೋ ಮುಂತಾದವರ ಮೂಲಕ ಅನಾವರಣಗೊಳಿಸುತ್ತಾರೆ.

"ಚಿದಂಬರ ರಹಸ್ಯ" ದಲ್ಲಿ ಏಲಕ್ಕಿ ಖಾಯಿಲೆಗೂ ಕೆಸರೂರಿನ ಅವನತಿಗೂ ಹೋಲಿಕೆ ತರುತ್ತಾರೆ. ಜೊತೆಯಲ್ಲೇ ಕಾಫಿ ಬೆಳೆ, ಕಾಡನ್ನು ನಾಶ ಮಾಡುತ್ತಿರುವ ಬ್ಯಾರಿಗಳು, ಕಂಟ್ರಾಕ್ಟರ್ಗಳು, ವನ್ಯಜೀವಿ ಹಾಳು ಮಾಡುವ ಗೋಸಾಯಿಗಳು, ಮೂಢನಂಬಿಕೆ, ಜಾತೀಯತೆ, ಮತೀಯವಾದ, ಅನೇಕ ಸಾಮಾಜಿಕ ಕಾರಣಗಳು ಬೆಸೆದಂತಿದೆ. ಜೋಗಿಹಾಳರ ಸಾವಿಗಾಗಲಿ, ರಫಿ–ಜಯಂತಿಯರ ಮರು ಚೇತನಕ್ಕಾಗಲಿ, ಅದೇ ಸಮಾಜದ ನಾನಾ ಮಗ್ಗುಲುಗಳು ಕಾರಣವಾಗುತ್ತವೆ. ಮನುಷ್ಯನ ವರ್ತನೆ, ಆಲೋಚನೆ, ಬದುಕಿನ ದಾರಿ ಪರಿಸರದೊಡನೆ ಬೆರೆತಿದೆ. ಅದನ್ನು ಮಣಿಸಿ, ನಾಶಮಾಡಿ ನಾವು ಉಳಿಯಲು ಸಾಧ್ಯವಿಲ್ಲ. ಇಂದು ಅಭಿವೃದ್ಧಿ ಎಂಬುದಕ್ಕೆ ಹೊಸ ಅರ್ಥ ಹುಡುಕಬೇಕಾಗಿದೆ. ಪರಿಸರವನ್ನೂ ಉಳಿಸಿ, ನಾವೂ ಉಳಿಯಬೇಕಾದ ಹೊಸ ದಾರಿ ಅನ್ವೇಷಿಸಬೇಕಾಗಿದೆ ಎನ್ನುತ್ತಾರೆ. ಬಡವರು ಹೊಟ್ಟೆಪಾಡು, ಶ್ರೀಮಂತರು ಹಗರಣಗಳಲ್ಲಿ ಮುಳುಗಿ ಮಧ್ಯಮ ವರ್ಗವೇ ಇಲ್ಲದೆ ಸಾಂಸ್ಕೃತಿಕ ನಿಷ್ಕ್ರಿಯತೆ ಉಂಟಾಗಿದೆ. "ಅವನತಿ" ಕತೆಯಲ್ಲೂ ಸೂರಾಚಾರಿಯ ಕಲೆ, ಗೌರಿಯ ಸೌಂದರ್ಯದ ಪ್ರಜ್ಞೆಯಿರದ ಇಡೀ ಬದುಕಿನ ಅವನತಿ ಗುರುತಿಸುತ್ತಾರೆ. ಅಂಡಮಾನ್ ಬಗ್ಗೆ ಬರೆಯುವಾಗ ಸಂಪನ್ಮೂಲಗಳು ಹಾಳಾಗದಂತೆ ಅವುಗಳಿಂದ ಆದಾಯ ಪಡೆಯುವ ವಿಧಾನವನ್ನು ನಾವು ಕಂಡುಕೊಳ್ಳಬೇಕು ಎನ್ನುತ್ತಾರೆ, ತೇಜಸ್ವಿಗೆ ಬರೀ ಮನುಷ್ಯ ಮುಖ್ಯವಲ್ಲ. ಪರಿಸರದ ಭಾಗವಾಗಿ ಮನುಷ್ಯ ಮುಖ್ಯವಾಗುತ್ತಾನೆ. "ಮಾಯಾಲೋಕ"ದಲ್ಲಿ ಬದಲಾಗುತ್ತಿರುವ ಮಲೆನಾಡಿನ ಚಿತ್ರವಿದೆ. ಕೀಟನಾಶಕಗಳಿಂದ ಪ್ರತಿವರ್ಷ ೩೦೦೦ ಜಾತಿಯ ಕೀಟಗಳು ನಾಶವಾಗುತ್ತಿದ್ದು, ಜೀವಜಾಲದ ಸರಪಳಿಯಲ್ಲಿ ಕೀಟಗಳ ಅನಿವಾರ್ಯತೆಯಿದೆ, ಎನ್ನುತ್ತಾರೆ. ಗ್ರಾಮ ಭಾರತದ ಅವನತಿಯನ್ನು ತುಕ್ಕೋಜಿ, ಸ್ತ್ರೀ ಶಕ್ತಿ ಪಡೆದುಕೊಳ್ಳುವ ಚಾಲನೆಯನ್ನು, ಕಿರುಗೂರಿನ ಗಯ್ಯಾಳಿಗಳು, ದಾಖಲಿಸುತ್ತವೆ. ಅವರ ಬರಹಗಳು ಸೋಲು ಗೆಲುವಿನ ಪರಿಧಿ ದಾಟಿ, ಪ್ರಯೋಗದಂತಿದೆ. ಅವರ ಆಸಕ್ತಿ ವ್ಯಕ್ತಿಯಿಂದ ಸಮಾಜಕ್ಕೆ, ಮುಂದೆ ಪರಿಸರಕ್ಕೆ ಚಲಿಸಿದೆ. ಜುಗಾರಿ ಕ್ರಾಸ್, ಮನುಕುಲದ ಕೇಂದ್ರ. ಜಾಗತೀಕರಣ, ಉದಾರವಾದ, ಯಂತ್ರನಾಗರೀಕತೆ ಅಭಿವೃದ್ಧಿ ಎಲ್ಲದರ ಹಿಡಿತಕ್ಕೆ ಒಳಪಟ್ಟರೂ ಅದರ ಹಿಂದಿನ ಶಕ್ತಿಗಳು ಅಗೋಚರವಾಗಿ ಉಳಿಯುತ್ತದೆ. ತ್ಯಕ್ತ ಕತೆ ಭಾಷೆಯ ಮಿತಿ ಹಾಗೂ ಭಾಷಾತೀತತೆ ಕುರಿತದ್ದು.

**ಸಾಮಾಜಿಕ ಅವ್ಯವಸ್ಥೆ ಕುರಿತಂತೆ:** ಸ್ನೇಹಿತನೊಬ್ಬನ ಸೈಕಲ್ಲಿಗೆ ದೀಪ ಇರಲಿಲ್ಲ ಎಂದು ಪೋಲಿಸ್ ಅವನ್ನು ಹಿಡಿದಾಗ, ಅವರಿಗೆ ಲಂಚ ಕೊಡುವುದಿಲ್ಲ ಎಂಬ ಹೊಟ್ಟೆಕಿಚ್ಚಿಗೆ ಹೀಗೆ ಮಾಡುತ್ತಾರೆ, ಎಂದು ಕೋರ್ಟಿನಲ್ಲಿ ವಾದ ಮಾಡಿ ಮ್ಯಾಜಿಸ್ಟ್ರೇಟರಿಂದ ದಂಡದ ವಿನಾಯತಿ ಪಡೆಯುತ್ತಾರೆ. ಭದ್ರಾ ಅಭಯಾರಣ್ಯದ ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಛೀಮಾರಿ ಹಾಕುತ್ತಾರೆ. ಸಂಸ್ಕೃತಿಯ ರಕ್ಷಣೆಯ ಹೆಸರಿನಲಿ ಆದಿವಾಸಿಗಳು ಹಿಂದಿನಂತೆಯೇ ಇರಬೇಕೆಂಬುದನ್ನು ಖಂಡಿಸುತ್ತಾರೆ. "ನಮ್ಮ ಮಕ್ಕಳು ಮುಂದೆ ಬಂದರೆ ಸಾಕು, ಅವರು ಮಾತ್ರ ಹಾಗೇ ಇರಲಿ ಎಂಬುದು ಯಾವ ನ್ಯಾಯ? ನಾವು ಯಾವ ರೀತಿ ಬದುಕಿಲ್ಲವೋ ಆ ರೀತಿ ಇತರರ ಬದುಕಲಿ ಎಂದು ಹೇಳುವ ಅಧಿಕಾರ ನಮಗಿಲ್ಲ", ಎಂಬ ನಿಲುವಿನವರು. ಗೋವಧೆ ಕಾನೂನನ್ನು ಬುದ್ಧಿಜೀವಿಗಳು ಧಾರ್ಮಿಕ ಹಾಗೂ ಆಹಾರ ಪದ್ಧತಿಯ ಹಿನ್ನಲೆಯಲ್ಲಿ ವಿಶ್ಲೇಷಿಸುತ್ತಿದ್ದಾಗ, ಇವರು ಅದನ್ನು ಸಾಮಾಜಿಕ ಹಾಗೂ ಆರ್ಥಿಕ ಆಯಾಮದಿಂದ ಗ್ರಹಿಸುವ ಪ್ರಯತ್ನ ಮಾಡುತ್ತಾರೆ. ಸರಕಾರ ಕೆರೆ ಹೂಳೆತ್ತುವಾಗ ಪರಿಸರ ನಾಶವಾಗುತ್ತದೆ ಎಂದು ಹಾರಾಡುವವರು ಅಧಿಕಾರಶಾಹಿಯ ವಿರುದ್ಧ ದನಿ ಎತ್ತದಿರುವ ಬಗ್ಗೆ ಬೇಸರಿಸುತ್ತಾರೆ. ಪರಿಸರ ನಾಶವನ್ನು ತಡೆಹಿಡಿಯಲಾಗದಿದ್ದರೂ, ಅಲ್ಲಿನ ಗಿಡಮರ, ಪ್ರಾಣಿ ಪಕ್ಷಿಗಳ ಬಗ್ಗೆ ಯಾವುದಾದರೂ ರೀತಿಯಲ್ಲಾದರೂ ವಿವರಗಳನ್ನು ದಾಖಲಿಸಬೇಕು ಎನ್ನುತ್ತಾರೆ. ಭೂಗತ

ಜಗತ್ತಿನ ಬಗ್ಗೆ ಹೇಳುವಾಗಲೂ' ಅಲ್ಲಿಯ ಮೂಲಮಂತ್ರ ನಿಷ್ಟೆ, ಅದನ್ನು ಮೀರಿದರೆ ಸಾವು ಖಚಿತ. ತಾನು ಉಳಿಯಬೇಕಾದರೆ ಇನ್ನೊಬ್ಬನನ್ನು ಬಲಿ ಪಡೆಯಬೇಕಾದ ಅನಿವಾರ್ಯತೆಯಿದೆ. ಅದೇ ರೀತಿ ಮನುಷ್ಯ ನಿಸರ್ಗದ ಜೊತೆಗೂ ವರ್ತಿಸುತ್ತಿರುವುದು ದುರಂತ. ಭೀಕರ ಬದುಕನ್ನು ಕಟ್ಟಿಕೊಡುವಾಗಲು ವಿವೇಕದ ಎಳೆ, ರೋಗ ನಿರೋಧಕ ಶಕ್ತಿ ಮೂಡಿಸಿಕೊಳ್ಳುವ ಕಡೆ ದಾರಿ ತೋರುತ್ತಾರೆ. ಜೀವ ವಿರೋಧಿ ನಡೆಗಳೆಲ್ಲವನ್ನೂ ಸಾರಾ ಸಗಟಾಗಿ ಧಿಕ್ಕರಿಸುತ್ತಾರೆ. ಸಾಲಗಾರ ರೈತ ಆತ್ಮಹತ್ಯೆ ಮಾಡಿಕೊಳ್ಳುವುದು ತಪ್ಪು ಎನ್ನುವುದರೊಂದಿಗೆ, ರೈತರ ಬಗ್ಗೆ ಸರಕಾರಿ ಅಧಿಕಾರಿಗಳು ನಿರ್ಲಜ್ಜರಾಗಿ ವರ್ತಿಸುವುದನ್ನು ಖಂಡಿಸುತ್ತಾರೆ. ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿರುವುದು ರೈತರಲ್ಲ, ಸರಕಾರ ಎಂದು ಚುಚ್ಚುತ್ತಾರೆ. ಸರಕಾರಿ ಅಧಿಕಾರಿಗಳು ಸಾರ್ವಜನಿಕ ಸಂಪನ್ಮೂಲವನ್ನು ಸದರವಾಗಿ ಕಂಡು, ನಿಯಮ ಬಾಹಿರವಾದುದನ್ನು ಕಾನೂನಿನ ರಕ್ಷೆಯಲ್ಲೇ ಮಾಡುತ್ತಿದ್ದಾರೆ. ಅಧಿಕಾರ ಪಡೆವ, ಅದನ್ನು ಉಳಿಸಿಕೊಳ್ಳುವ ನೆಪದಲ್ಲಿ ನಮ್ಮ ಕಾಡುಗಳನ್ನು ತೆರೆದಿಟ್ಟ ಖಜಾನೆಯನ್ನು ಲೂಟಿಮಾಡಿದಂತೆ ಮಾಡುತ್ತಿದ್ದಾರೆ. ಎಲಕ್ಷನ್ ವೇಳೆಯಲ್ಲಿ ಜನರ ಆತ್ಮರಕ್ಷಣೆಗಾಗಿ ನೀಡಿರುವ ಬಂದೂಕನ್ನು ಪೋಲೀಸರು ಪಡೆದು ಕೊಟ್ಟಿಗೆಯಲ್ಲಿ ಸೌದೆ ಒಟ್ಟಿದಂತೆ ಎಸೆದಿರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾರೆ. ನಮ್ಮಲ್ಲಿ ಈದ್ ಮಿಲಾದ್ ಹಬ್ಬದ ಮೆರವಣಿಗೆಗೆ ಪೋಲಿಸರ ರಕ್ಷಣೆ ಅಗತ್ಯವಿರುವುದನ್ನು ನೋಡಿ, ಈ ರೀತಿ ಹಬ್ಬ ಮಾಡೋಕೆ ನಾಚಿಕೆ ಎಂದು ಜಿಗುಪ್ಸೆ ಪಡುತ್ತಾರೆ. ನಮ್ಮ ಕಿರಿಯರಿಗೆ ನಾವು ನೀಡುತ್ತಿರುವ ಸಮಾಜದ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಇಂದು ಪ್ರಾಮಾಣಿಕ ಅಧಿಕಾರಿ ನಿರ್ದಯಿ, ಕ್ರೂರಿ. ಭ್ರಷ್ಟನಾದವನು, ಲಂಚಗುಳಿ ಮಾನವೀಯವಾಗಿ ಕಾಣುತ್ತಿದ್ದಾನೆ. ಜನರ, ಯೋಜನೆಗಳ, ಪ್ರತಿ ಸೋಲು ಸಂಬಂಧಿಸಿದ ಇಲಾಖೆಗಳಿಗೆ ಹೆಚ್ಚು ಹಣ ಗಳಿಸುವ ತಂತ್ರವಾಗುತ್ತಿರುವುದನ್ನು ಲೇವಡಿ ಮಾಡುತ್ತಾರೆ.

**ಸಾಮಾಜಿಕ ಚಳುವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಿಕೆ:** ಇವರ ಆಲೋಚನೆಗಳು ಮೂರ್ತರೂಪ ಪಡೆಯುತ್ತಿದ್ದುದು ಅವರ ವ್ಯಯಕ್ತಿಕ ಪಾಲ್ಗೊಳ್ಳುವಿಕೆಯಿಂದಾಗಿ. ಸಣ್ಣ ಬೆಳೆಗಾರರ ಒಕ್ಕೂಟ, ಸಮಾಜವಾದಿ ಯುವಜನ ಸಭಾ, ಅಂತರಜಾತಿ ವಿವಾಹಿತರ ಸಮಾವೇಶ, ಕುದುರೆಮುಖ ಹೋರಾಟ ಸಮಿತಿ, ಕೋಮು ಸೌಹಾರ್ದ ವೇದಿಕೆ ಹೀಗೆ ಅನೇಕ ಹೋರಾಟಗಳ ನಾಯಕತ್ವವನ್ನು ವಹಿಸಿಕೊಳ್ಳುವ ಮೂಲಕ ಸಾಮಾಜಿಕ ಅರಿವು ಮೂಡಿಸುತ್ತಿದ್ದರು. ಕುದುರೆಮುಖ ಗಣಿಗಾರಿಕೆ ವಿರುದ್ಧ ಅಲ್ಲಿನ ಜನರನ್ನೂ ಸೇರಿಸಿಕೊಂಡು ಮೊಕದ್ದಮೆ ಹೂಡಿದರು. ಎಸ್.ಎಂ.ಕೃಷ್ಣ ಅವರ ಸರ್ಕಾರ ಇವರ ತೀರ್ಮಾನವನ್ನು ಅನುಮೋದಿಸುವುದು ಚಳುವಳಿಯ ಗೆಲುವಿಗೆ ಸಾಕ್ಷಿ. ಸೋಮಾರಿಗಳಾಗಿ ಇತರರ ಶ್ರಮದ ಫಲ ಉಣ್ಣುವವರ ಬಗ್ಗೆ ಕಿಡಿ ಕಾರುತ್ತಿದ್ದರು. ಪಶ್ಚಿಮ ಘಟ್ಟಗಳನ್ನು ಉಳಿಸಿಕೊಳ್ಳುವುದರಲ್ಲೂ ಇದೇ ಪ್ರಯತ್ನ ಕಾಣುತ್ತೇವೆ. "ನಮಗೆ ಏನನ್ನು ಸೃಷ್ಟಿಸಲು ಸಾಧ್ಯವಿಲ್ಲವೋ ಅದನ್ನು ನಾಶಮಾಡುವ ಹಕ್ಕಿಲ್ಲ" ಎನ್ನುತ್ತಾರೆ. ವಿರೋಧ, ಪ್ರತಿಭಟನೆಗಳೇ ನವ ಸಮಾಜದ ಅಡಿಪಾಯವಾಗಬೇಕು ಎಂದು ಕನಸಿದವರು.

**ಮಾನವ ಸಂಬಂಧಗಳ ಬಗ್ಗೆ:** ಅವರ "ಲಿಂಗ ಬಂದ" ಕತೆ ಎಳೆಯರ ಮನಸ್ಸಿನ ಭಯವನ್ನು ಹೇಳುತ್ತಲೇ, ಬಾಳಿನ ಸರಪಳಿಯಲ್ಲಿ ಒಬ್ಬರು ಮತ್ತೊಬ್ಬರ ಕೈಗೊಂಬೆ ಎಂಬುದನ್ನು ಸರಳವಾಗಿ ನಿರೂಪಿಸಿದ್ದಾರೆ. ವ್ಯಕ್ತಿಯ ಅಸಹಾಯಕತೆಯಿಂದ ವ್ಯವಸ್ಥೆಯ ಅಮಾನವೀಯ ಕ್ರೌರ್ಯದವರೆಗೆ ಅವರ ಕತೆಗಳ ಹರಹಿದೆ. ಮೂಡಿಗೆರೆಯಲ್ಲಿ ನಡೆವ ಎಲ್ಲಾ ಅನಾಹುತಕ್ಕೆ ಆನೆ ಕಾರಣವಾಗುವುದು (ಕೃಷ್ಣೇಗೌಡನ ಆನೆ), ಕಾಡಿನ ನಾಶಕ್ಕೆ ರಾಜಕಾರಣ ಹಾಗೂ ನೌಕರಶಾಹಿಯ ಅಕೃತ್ಯಗಳು

ಕಾರಣವಾಗುವುದನ್ನು ಯಾವುದೇ ಹಿಂಜರಿಕೆಯಿಲ್ಲದೆ ಹೇಳಬಲ್ಲರು. ತನ್ನ ತಂದೆಯ ಬಗ್ಗೆ ಸಹ ಪಾರದರ್ಶಕವಾಗಿ "ಅಣ್ಣನ ನೆನಪು" ನಲ್ಲಿ ಚಿತ್ರಿಸಿರುವುದು ಅವರು ಯಾರ ಮರ್ಜಿ ಹಿಡಿಯದೆ, ಸತ್ಯದ ಅನಾವರಣಕ್ಕೆ ತಮ್ಮ ಕಲಾಕೃತಿಗಳ ಕ್ಯಾನ್ವಾಸ್ ಬಳಸಿಕೊಳ್ಳುವುದಕ್ಕೆ ಸಾಕ್ಷಿ. ಸಿಟ್ಟಿನ ಜೊತೆಗು ಒಂದು ಅಂತರ್ಗತ ಶಿಸ್ತಿನವರಾಗಿದ್ದರು. ಹೆಂಡತಿಗೆ ಬೇಸರವಾಗದಂತೆ ಮನೆಯನ್ನು ಸ್ವಚ್ಛವಾಗಿಡುವುದು. ತಾವು ಕುತೂಹಲದಿಂದ ಕಲಿತ ಫೋಟೋಗ್ರಫಿಯನ್ನು ಸ್ನೇಹಿತರಿಗೆ ಹೇಳಿಕೊಡುವುದು. ತಾವು ಹುಡುಕಿದ ಕಾಡಿನ ಕೀಟ, ಸಸ್ಯಗಳ ಬಗ್ಗೆ ಸಸ್ಯಶಾಸ್ತ್ರದ ವಿದ್ಯಾರ್ಥಿಗಳಿಂದ ಕೇಳಿ, ತಿಳಿದು, ಲೇಖನ ರಚಿಸುವುದು. ಹಾರ್ನಬಿಲ್ ಹಕ್ಕಿಗಳು ನಶಿಸಿಹೋಗುತ್ತಿವೆ. ಮುಂದೆ ನೋಡಲು ಸಿಗದು. ಇಂದೇ ನೋಡಿಬಿಡಿ ಎಂದು ಜೊತೆಗಿರುವವರಿಗೆ ವಿಷಾದದಿಂದ ಹೇಳುವುದು. ಮಿಸ್ಸಿಂಗ್ ಲಿಂಕ್ಸ್ ಕೃತಿ ಬರೆದಾಗ ಇದನ್ನು ಪದ್ಮಾ ಅವರೆ ಬರೆಯಬಹುದಿತ್ತು ಎನ್ನುವುದು ಅವರು ಇತರರನ್ನು ಬರೆಯಲು ಪ್ರೋತ್ಸಾಹಿಸುತ್ತಿದ್ದುದ್ದಕ್ಕೆ ನಿದರ್ಶನ. ಮಾನವ ಸಂಬಂಧಗಳು ಚಿರಂತನ. ಎಲ್ಲಾ ವೈರುಧ್ಯಗಳ ನಡುವೆ ಪ್ರೀತಿ ಉಳಿಯುತ್ತದೆ. ಕನಸನ್ನು ಹೊಂದಿರುವವನು ಪ್ರೀತಿಯನ್ನು ಕೊಲ್ಲಲಾರ ಎಂಬುದನ್ನು ಚಿದಂಬರ ರಹಸ್ಯ ದ ರಫಿ, ಜಯಂತಿ ಬದುಕಿ ಉಳಿಯುವುದರ ಮೂಲಕ ಪ್ರತಿಪಾದಿಸುತ್ತಾರೆ.

**ಭಾಷೆ ಹಾಗೂ ತಂತ್ರಾಂಶವನ್ನು ಕುರಿತಂತೆ** : ಕೇವಲ ಸಾಹಿತ್ಯ ರಚನೆ, ಪ್ರಶಸ್ತಿ ನೀಡುವಿಕೆ, ಕನ್ನಡ ಕಲಿಕೆಯನ್ನು ಕಡ್ಡಾಯಗೊಳಿಸುವಿಕೆಯಿಂದ ಮಾತ್ರ ಭಾಷೆಯನ್ನು ಉಳಿಸಿಕೊಳ್ಳಲು ಅಸಾಧ್ಯ. ಜಾಗತಿಕ ಪೈಪೋಟಿಗೆ ಸಲ್ಲುವ ಸಮರ್ಥ ತಂತ್ರಾಂಶ ಸಿದ್ಧವಾಗಿ ಬಳಕೆಯಾದರೆ ಮಾತ್ರ ಭಾಷಾ ಅಸ್ಥಿತ್ವ ಸಾಧ್ಯ ಎಂದು ಭಾವಿಸಿ, "ಕುವೆಂಪು ಕನ್ನಡ ತಂತ್ರಾಂಶ" ವನ್ನು ಲೋಕಾರ್ಪಣೆ ಮಾಡುತ್ತಾರೆ. ಆದರೆ ಸರ್ಕಾರದ ಅಲಕ್ಷ ಮನೋಭಾವ ಗುರಿ ಸಾಧಿಸುವಲ್ಲಿ ವಿಫಲವಾಗಿದೆ. ಭಾಷಗೆ ಸಂಬಂಧಿಸಿದ ಕೆಲಸ ಕೇವಲ ಸಾಫ್ಟ್ವೇರ್ ಇಂಜಿನಿಯರರ ಕೆಲಸವಲ್ಲ. ಅದರಲ್ಲಿ ಭಾಷಾ ಶಾಸ್ತ್ರಜ್ಞರು, ವ್ಯಾಕರಣ ಪಂಡಿತರು, ಸಾಹಿತ್ಯ ಪರಿಣಿತರು, ಉಚ್ಛರಣಾ ಶಾಸ್ತ್ರಜ್ಞರು ಸಹ ಕಲೆತು ಕಲಸ ಮಾಡಬೇಕಾಗುತ್ತದೆ. ಯಾವುದೇ ವಿಶ್ವವಿದ್ಯಾಲಯಗಳಾಗಲಿ, ಸರ್ಕಾರವಾಗಲಿ, ಎಲೆಕ್ಟ್ರಾನಿಕ್ ಮಾಧ್ಯಮದಿಂದ ಭಾಷೆಗೆ ಅಪಾಯ ಎಂಬುದನ್ನು ಅಂದಾಜು ಮಾಡದೇ ಇರುವುದರ ಬಗ್ಗೆ ಖೇದ ವ್ಯಕ್ತ ಪಡಿಸುತ್ತಾರೆ. ಇಂದಿನ ತಾಂತ್ರಿಕ ಜಗತ್ತು ಅನಕ್ಷರಸ್ಥರು, ಮೌಢ್ಯವನ್ನು ಒಳಗೊಂಡ ಜನರನ್ನು ಕಬಳಿಸುತ್ತಿರುವುದನ್ನು ಅವರ "ತಬರನ ಕಥೆ", ಕುಬಿ ಮತ್ತು ಇಯಾಲ, ಮಾಯಾಮೃಗ, ಕಿರುಗೂರಿನ ಗಯ್ಯಾಳಿಗಳು, ನಿಗೂಢ ಮನುಷ್ಯರು ಬೇರೆ ಬೇರೆ ಆಯಾಮಗಳಲ್ಲಿ ಕತೆಯಾಗಿಸಿದೆ. ಒಂದು ಭಾಷೆಯ ನಾಶಕ್ಕೆ ಪರಭಾಷಾ ವ್ಯಾಮೋಹ, ಸ್ವಭಾಷಾ ಅಂಧಾಭಿಮಾನ ಕಾರಣ. ಭಾಷೆಯನ್ನು ತಂತ್ರಜ್ಞಾನದೊಡನೆ ಮಿಳಿತ ಗೊಳಿಸದಿದ್ದರೆ ಅದು ಸಾಯುತ್ತದೆ ಎಂದು ಭಾವಿಸುತ್ತಾರೆ.

**ಶಿಕ್ಷಣ ಕುರಿತಾಗಿ** : ಬದುಕೇ ದೊಡ್ಡ ಶಾಲೆ. ಅಲ್ಲಿ ಕಲಿಯಬೇಕು. ಗ್ರಂಥಾಲಯದಲ್ಲಿ ಕೊಳೆಯುವ ಪುಸ್ತಕ, ಪ್ರಬಂಧಗಳು ವ್ಯರ್ಥ. ದೇಸಿ ವಿಜ್ಞಾನದ ಕೌಶಲವನ್ನು ಗಳಿಸುವ ಸಂದೇಶವನ್ನು ಅವರು ಮಂದಣ್ಣ, ವೆಂಕ್ಟ ಮುಂತಾದವರ ಮೂಲಕ ನೀಡುತ್ತಾರೆ. ಅದು ಹಾರುವ ಓತಿ, ಗ್ಲೋಬವರ್ಮ್, ಮಡಕೆಯಲ್ಲಿ ಜೇನು ಕೂರಿಸುವ ವಿಧಾನ ಯಾವುದೇ ಇರಬಹುದು. ಕುವೆಂಪು ಅವರ ಕೈ ಬರಹವನ್ನು ಕಂಪ್ಯೂಟರ್ಗೆ ಅಳವಡಿಸುವ ಮೂಲಕ, ಮಿಲೇನಿಯಂ ಸರಣಿಯ ಬರಹ, ಜಿಮ್ ಕಾರ್ಬೆಟ್ ನ ಬೇಟೆಯ ಅನುಭವಗಳನ್ನು ಕನ್ನಡಕ್ಕೆ ತರುವ ಮೂಲಕ ಅಪಾರ ಯುವ ಓದುಗರನ್ನು ಸೃಷ್ಟಿಸಿದರು. "ಹಿ ಅಚೀವ್ಡ ಇನ್ ಸ್ಪೈಟ್ ಅಫ್ ಸ್ಕೂಲಿಂಗ್" ಎನ್ನುವುದರಲ್ಲಿ ನಂಬಿಕೆಯಿರುವ ಇವರು ಹೆಚ್ಚು ಹೋಂವರ್ಕ

ಕೊಡುವ ಶಾಲೆಗಳ ಬಗೆಗಿನ ಪೋಷಕರ ಭ್ರಮೆಗೆ ಉತ್ತರವಾಗಿ, ಮಗು ಸಮಾಜ ಮತ್ತು ಪ್ರಕೃತಿಯ ನಡುವೆ ಕಲಿಯಬೇಕು ಎನ್ನುತ್ತಾರೆ. ಮಲೆನಾಡಿನ ಶಾಲೆಗಳಿಗೆ ಮಳೆಗಾಲದಲ್ಲಿ ರಜೆ ನೀಡಬೇಕೆಂದು ಸರಕಾರಕ್ಕೆ ಸಲಹೆ ನೀಡಿದರೂ, ಅದು ಜಾರಿಯಾಗದೆ ಇರುವುದು ವ್ಯವಸ್ಥೆಯ ನಕಾರಾತ್ಮಕ ಧೋರಣೆಯಿಂದಾಗಿ. ಇಂಗ್ಲೀಷ್ ಅನ್ನು ಯಾವ ತರಗತಿಯಿಂದ ಹೇಳಿಕೊಡುವುದರಿಂದ ಅನಾಹುತವೂ ಇಲ್ಲ. ಪವಾಡವೂ ಇಲ್ಲ. ಶಿಕ್ಷಣದ ಅಡಿಪಾಯವೇ ಅಪಾಯದಲ್ಲಿರುವಾಗ ಯಾವಭಾಷೆಯೂ ತಡೆಗೋಡೆಯಾಗದು.ಕೃಷಿಕನಿಗೆ, ಕೃಷಿ ವಿಜ್ಞಾನಿಗಳು ಏನನ್ನು ಬೆಳೆಯಬೇಕೆಂದು ಹೇಳುತ್ತಾರೆಯೇ ಹೊರತು ಮಾರುಕಟ್ಟೆಯ ಬಗ್ಗೆ ಮಾಹಿತಿ ನೀಡದೆ ನಷ್ಟಕ್ಕೆ ಕಾರಣರಾಗುತ್ತಾರೆ. ವಿದ್ಯಾಭ್ಯಾಸವೇ ನಮ್ಮ ಯುವಕರನ್ನು ಹಳ್ಳಿಗೆ ಅಪರಿಚಿತರನ್ನಾಗಿಸುತ್ತಿದೆ. ಕೃಷಿಯೂ ವಿದೇಶಿಯರ ಕೈ ಸೇರಿ, ಜೀವನ ವಿಧಾನವಾದುದು ಉತ್ಪಾದನಾ ವಿಧಾನವಾಗಿ ಮಾರ್ಪಟ್ಟಿದೆ, ಇದೆಲ್ಲದರ ಹಿಂದೆ ಸರಕಾರದ ಬೇಜವಾಬ್ದಾರಿ ಧೋರಣೆ ಗುರುತಿಸುತ್ತಾರೆ.

ಮೂಡಿಗೆರೆಯ ಜನ ಅವರನ್ನು ಹುಲಿ ಎನ್ನುತ್ತಿದ್ದರು. ಅವರ ಅವಸಾನವಾದಾಗ "ಹುಲಿ ಈಗ ಇಲ್ಲ. ನಮ್ಮ ನದಿಯ ಮರಳೆಲ್ಲಾ ಬೆಂಗಳೂರಿಗೆ, ಕಲ್ಲು ಬಂಡೆಗಳೆಲ್ಲಾ ಯಾವುದೋ ಡಾಂಬರ್ ರಸ್ತೆಗೆ. ಈಗ ಹೇಳೋರ್ ಕೇಳೋರ್ ಯಾರೂ ಇಲ್ಲ" ಎಂದು ಜನ ರೋಧಿಸುವುದು, ತೇಜಸ್ವೀ ಅವರ ಪಾಲಿಗೆ ಏನೆಲ್ಲಾ ಆಗಿದ್ದರು ಎಂಬುದನ್ನು ಹೇಳುತ್ತದೆ. ಸೂಕ್ಷ್ಮ ಅವಲೋಕನದ, ಮಿತ ಮಾತುಗಾರರಾದ ಇವರಿಗೆ, ಜೀವಜಗತ್ತಿನ ಅಣು ಅಣುವೂ ಕತೆಗೆ ವಸ್ತುಗಳಾಗಿದ್ದವು. ಮೂಡಿಗೆರೆಯ ಪರಿಸರದಿಂದಲೇ ತಮ್ಮ ಅದ್ಭುತ ಪ್ರತಿಭೆಗೆ ಹೊಳಪು ಪಡೆದವರು. ಪ್ರಚಾರಪ್ರಿಯತೆ, ಹೊಗಳಿಕೆ ಪುರಸ್ಕಾರಗಳಿಂದ ದೂರಸರಿದವರು. ಲಂಕೇಶ್ ಪತ್ರಿಕೆಯ ಮೂಲಕವೇ ತಾವು ಹೆಚ್ಚು ಹೆಚ್ಚು ಬರೆಯುವ ಹಾಗೂ ಅಗಾಧ ಜನರನ್ನು ತಲುಪುವ ಅವಕಾಶ ಬಂದಿದ್ದು ಎಂದು ಕೃತಜ್ಞತೆ ಸಲ್ಲಿಸುತ್ತಾರೆ. ಇದು ಮಾಧ್ಯಮಗಳ ಅವಶ್ಯಕತೆಯನ್ನು ಹೇಳುತ್ತದೆ. ಮಾನವತೆಯಿಂದ ಮನುಷ್ಯ ತೆಪ್ಪಗೆ ಬದುಕಿದರೆ ಸಾಕು ಯಾವ "ಇಸಂ" ಬೇಕಾಗಿಲ್ಲ. ಸಾವನ್ನು ಅರಿಯಲು ಇರುವ ಒಂದೇ ಮಾರ್ಗವೆಂದರ ಬದುಕು. ವಾಸ್ತವಕ್ಕೆ ಅಪಚಾರ ಮಾಡದೆ, ಆತ್ಮವಂಚನೆ ಮಾಡಿಕೊಳ್ಳದೆ ಬದುಕಬೇಕು ಎನ್ನುತ್ತಾರೆ. ಎಲ್ಲಾ ಸಮಸ್ಯೆಗಳಿಗೆ ಪರಿಹಾರ ನಮ್ಮ ಬಳಿಯೇ ಇದೆ. ಹೊಸ ಸಾಧ್ಯತೆಗಳಿಗೆ ತೆರೆದುಕೊಳ್ಳಬೇಕು ಅಷ್ಟೇ. ಅವರ ಸರಳ ಬರವಣಿಗೆಯ, ಗಂಭೀರ ವಿಚಾರಗಳನ್ನು ಕಾರ್ಯರೂಪಕ್ಕೆ ತರಬೇಕಾದ ತುರ್ತು, ಬದ್ಧತೆಗಳ ಅಗತ್ಯವಿದೆ. ಭಾರತದ ಕಠೋರ ವಾಸ್ತವದ ನಡುವೆ ಬದುಕಲು ಹಗಲುಗನಸುಗಳು ಅಗತ್ಯದ ಮನವರಿಕೆ ಮಾಡಿಕೊಟ್ಟ ದೈತ್ಯ ಪ್ರತಿಭೆ ತೇಜಸ್ವೀ.

**ಪರಾಮರ್ಶನ ಕೃತಿಗಳು:**

ಚಿದಂಬರ ರಹಸ್ಯ,
ಮಾಯಾಲೋಕ,
ಕಿರುಗೂರಿನ ಗಯ್ಯಾಳಿಗಳು,
ಜುಗಾರಿ ಕ್ರಾಸ್,
ಅಬಚೂರಿನ ಪೋಸ್ಟಾಫೀಸ್.

ತೇಜಸ್ವಿಯನ್ನು ಹುಡುಕುತ್ತಾ,...ಸಂ; ಆರ್.ದಿ.ಜಿ.
ಹೊಸ ವಿಚಾರಗಳು ಕೆ.ಪಿ. ತೇಜಸ್ವಿ
ವಿಮರ್ಶೆಯ ವಿಮರ್ಶೆ ಕೆ.ಪಿ. ತೇಜಸ್ವಿ
ಅಣ್ಣನ ನೆನಪು ಕೆ.ಪಿ.ತೇಜಸ್ವಿ